ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	228
ವಿಧಾನ ಪರಿಷತ್ತು ಸದಸ್ಯರ ಹೆಸರು	:	ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	02.02.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಸರ್ಕಾರ ಎಷ್ಟು ಪಡಿತರ ಚೀಟಿಗಳನ್ನು ವಿತರಿಸಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿತರಿಸಲಾದ ಹೊಸ ಪಡಿತರ ಚೀಟಿಗಳ ವಿವರ:
<table><tr><td>ಆದ್ಯತಾ(ಬಿಪಿಎಲ್)</td><td>2687148</td></tr><tr><td>ಆದ್ಯತೇತರ(ಎಪಿಎಲ್)</td><td>443866</td></tr><tr><td>ಅಂತ್ಯೋದಯ</td><td>310612</td></tr></table>ಜಿಲ್ಲಾವಾರು ಮಾಹಿತಿ ಅನುಬಂಧ-1 ಮತ್ತು 2 ರಲ್ಲಿ ಲಗತ್ತಿಸಿದೆ.</td></tr>
<tr><td>ಆ</td><td>ಬಿಪಿಎಲ್ ಕಾರ್ಡ್ ಪಡೆಯಲು ಇರುವ ಮಾನದಂಡಗಳೇನು;</td><td>ಈ ಕೆಳಗಿನ 04 ಮಾನದಂಡಗಳಿಗೆ ಒಳಪಡದವರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಿರುತ್ತಾರೆ.
1. ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.
2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.
3.ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ವಾಣಿಜ್ಯ ವಾಹನವನ್ನು ಅಂದರೆ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬಗಳನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನವನ್ನು ಹೊಂದಿರುವ ಎಲ್ಲಾ ಕುಟುಂಬಗಳು.
4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಿಂತ ಹೆಚ್ಚಿಗೆ ಇರುವ ಕುಟುಂಬಗಳು.</td></tr>
</table>

ಇ	ರಾಜ್ಯದಲ್ಲಿ ಸರ್ಕಾರ ವಶಪಡಿಸಿಕೊಂಡಿರುವ ಅಕ್ರಮ ಪಡಿತರ ಚೀಟಿಗಳೆಷ್ಟು;	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಒಟ್ಟು 2,28,188 ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿರುತ್ತದೆ.
ಈ	ಸರ್ಕಾರ ಯಾವ ಯಾವ ಮಾನದಂಡಗಳನ್ನು ಅನುಸರಿಸಿ ಪಡಿತರ ಅಂಗಡಿಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗುತ್ತದೆ;	ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016 ರ ಕಲಂ 6 ಮತ್ತು ಇದಕ್ಕೆ ಅಳವಡಿಸಿದ ದಿನಾಂಕ 21-05-2018 ಮತ್ತು 18-12-2020ರ ತಿದ್ದುಪಡಿ ಆದೇಶಗಳಲ್ಲಿ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಕೆಳಕಂಡ ಆದ್ಯತೆಯನ್ನು ನಿಗಧಿಪಡಿಸಲಾಗಿದ್ದು ಅದರಂತೆ ನ್ಯಾಯಬೆಲೆ ಅಂಗಡಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಎ) ಸರ್ಕಾರದ ನಿಗಮಗಳು/ಗ್ರಾಮ ಪಂಚಾಯಿತಿ/ಸ್ಥಳೀಯ ನಗರ ಸಂಸ್ಥೆಗಳು ಬಿ) ಸಹಕಾರ ಸಂಘಗಳು. 1. ಟಿಎಪಿಸಿಎಂಎಸ್/ಕೋ-/ಅಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳು. 2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ಪಿ.ಎಸ್.ಎಸ್.ಎನ್ 3. ಹಾಪ್ ಕಾಮ್ಸ್ 4. ಅಧಿಕೃತ ನೋಂದಣಿಯಾದ ಸಹಕಾರ ಸಂಘಗಳು 5. ಅಧಿಕೃತ ನೋಂದಣಿಯಾದ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು 6. ನೋಂದಣಿಯಾದ ಆದಿವಾಸಿ ವಿವಿದ್ದೋದ್ದೇಶ ಸಹಕಾರ ಸಂಘಗಳು. 7. ನೋಂದಣಿಯಾದ ನೇಕಾರರ ಸಹಕಾರ ಸಂಘಗಳು 8. ನೋಂದಣಿಯಾದ ಮಹಿಳಾ ವಿವಿದ್ದೋದ್ದೇಶ ಸಹಕಾರ ಸಂಘಗಳು 9. ನೋಂದಣಿಯಾದ ವಿವಿದ್ದೋದ್ದೇಶ ಸಹಕಾರ ಸಂಘಗಳು 10. ಅಂಗವಿಕಲ ಕಲ್ಯಾಣ ಸಹಕಾರ ಸಂಘಗಳು 11. ಸಹಕಾರ ಸಂಘಗಳು ನಡೆಸುವ ಬ್ಯಾಂಕ್ ಅಥವಾ ಕೋ- ಅಪರೇಟಿವ್ ಬ್ಯಾಂಕುಗಳು. 12. ನ್ಯಾಯಬೆಲೆ ಅಂಗಡಿ ಮಂಜೂರು ಮಾಡುವ ಗ್ರಾಮ ಅಥವಾ ಸ್ಥಳ (locality) ದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದಿಂದ ಗುರುತಿಸಲ್ಪಟ್ಟ ಸ್ತ್ರೀ ಶಕ್ತಿ ಗುಂಪು ಮತ್ತು ಮಹಿಳಾ ಸ್ವ ಸಹಾಯ ಗುಂಪುಗಳು. ಅರ್ಜಿ ಸಲ್ಲಿಸುವ ದಿನಾಂಕಕ್ಕೆ 3 ವರ್ಷಗಳಿಗೆ ಕಡಿಮೆ ಅಲ್ಲದ ಅವಧಿಗೆ ಅಸ್ತಿತ್ವದಲ್ಲಿದ್ದು, ಸಂಪೂರ್ಣ ಒಂದು ವರ್ಷದ ಅವಧಿಗೆ 1 ಲಕ್ಷ ರೂ.ಗಳ ಕನಿಷ್ಠ ಬ್ಯಾಂಕ್ ಬ್ಯಾಲೆನ್ಸ್ ಹೊಂದಿದ್ದು ಆಯುಕ್ತರಿಂದ ಆಗಿಂದಾಗ್ಗೆ ನೀಡಲಾಗುವ ಎಲ್ಲಾ ಹೆಚ್ಚುವರಿ ಷರತ್ತುಗಳನ್ನು ಪೂರೈಸಿರಬೇಕು 13. ಖಾಸಗಿ- ಎ) ವಿಕಲಚೇತನರ ವರ್ಗBench mark disability (ಪ್ರಾರಂಭಿಕವಾಗಿ 400 ನ್ಯಾಯಬೆಲೆ ಅಂಗಡಿಗಳು) ಮತ್ತು ಬಿ) ಮಂಗಳಮುಖಿಯರ ವರ್ಗ (ಪ್ರಾರಂಭಿಕವಾಗಿ 30 ನ್ಯಾಯಬೆಲೆ ಅಂಗಡಿಗಳು)

		ಸಿ) ಮೇಲ್ಕಂಡ ಸಹಕಾರ ಸಂಘಗಳ ಗುಣಮಟ್ಟವನ್ನು ಅವರಿಗೆ ನೀಡಲಾಗಿರುವ ಎ ಬಿ ಮತ್ತು ಸಿ ಶ್ರೇಣಿಯ ಆಡಿಟ್ ವರದಿಯನ್ನು ಪರಿಗಣಿಸಲಾಗುವುದು ಡಿ) ಸದರಿ ಸಹಕಾರ ಸಂಘಗಳು 03 ವರ್ಷಗಳಿಗಿಂತ ಹಿಂದಿನವುಗಳಾಗಿರಬೇಕು ಹಾಗೂ ಕಳೆದ 2 ವರ್ಷಗಳಿಂದ ನಿರಂತರವಾಗಿ ರೂ.200000/-ದಷ್ಟು ಮೊತ್ತದ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು.
ಉ	ಪಡಿತರ ಅಂಗಡಿಗಳನ್ನು ನಡೆಸುತ್ತಿರುವವರಿಗೆ ನೀಡುತ್ತಿರುವ ಸವಲತ್ತುಗಳೇನು;	ನ್ಯಾಯಬೆಲೆ ಅಂಗಳಿಗೆ ಪ್ರತಿ ಕ್ವಿಂಟಾಲ್ ಪಡಿತರ ವಿತರಣೆ ಪ್ರಮಾಣಕ್ಕೆ ರೂ 100/- ಚಿಲ್ಲರೆ ಲಾಭಾಂಶವನ್ನು ನೀಡಲಾಗುತ್ತದೆ. ಇದರೊಂದಿಗೆ ಒಂದು ಬಾರಿ ಬಳಕೆ ಮಾಡಿದ ಗೋಣಿ ಚೀಲವನ್ನು ಸಹ ಮಾರಾಟ ಮಾಡಿಕೊಳ್ಳಲು ಅವಕಾಶವಿರುತ್ತದೆ. ಇದಲ್ಲದೇ ರಾಜ್ಯದಲ್ಲಿ ಜಾರಿಯಿರುವ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016 ಕ್ಕೆ ಅಳವಡಿಸಿದ ದಿನಾಂಕ 05-06-2017ರ ತಿದ್ದುಪಡಿ ಆದೇಶದನ್ವಯ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಪದಾರ್ಥಗಳನ್ನು ಹೊರತುಪಡಿಸಿ ಪಡಿತರೇತರ ಮತ್ತು ಅಗತ್ಯವಸ್ತುಗಳೇತರ ಗ್ರಾಹಕರಿಗೆ ಉಪಯುಕ್ತವಾದ ವಸ್ತುಗಳನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.
ಊ	ಹೊಸದಾಗಿ ಪಡಿತರ ಅಂಗಡಿಗಳನ್ನು ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ? (ಮಾಹಿತಿ ನೀಡುವುದು)	ನ್ಯಾಯಬೆಲೆ ಅಂಗಡಿಯ ಅಗತ್ಯತೆ ಕಂಡುಬಂದ ಪ್ರದೇಶಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಸಂಬಂಧಿಸಿದ ಜಿಲ್ಲೆಯ ಜಂಟಿ/ಉಪನಿರ್ದೇಶಕರುಗಳು ನಿಯಮಾನುಸಾರ ಪ್ರಕಟಣೆ ಹೊರಡಿಸಿ ನಿಗಧಿಪಡಿಸಿದ ಮಾನದಂಡಗಳನ್ನು ಪರಿಗಣಿಸಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ.

ಆನಾಸ 28 ಡಿಆರ್ ಎ 2021 (ಇ-ಆಫೀಸ್)

(ಉಮೇಶ ಪಿ. ಕತ್ತಿ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

LCQ - 228
ಅನುಬಂಧ-1

ಕಳೆದ ಮೂರು ವರ್ಷಗಳಲ್ಲಿ ವಿತರಿಸಲಾದ ಪಡಿತರ ಚೀಟಿಗಳ ವಿವರ

ಜಿಲ್ಲೆ	2017-18			2018-19			2019-20			ಒಟ್ಟು		
	ಆದ್ಯತಾ ಪಡಿತರ ಚೀಟಿ	ಆದ್ಯತೇತರ ಪಡಿತರ ಚೀಟಿ	ಒಟ್ಟು	ಆದ್ಯತಾ ಪಡಿತರ ಚೀಟಿ	ಆದ್ಯತೇತರ ಪಡಿತರ ಚೀಟಿ	ಒಟ್ಟು	ಆದ್ಯತಾ ಪಡಿತರ ಚೀಟಿ	ಆದ್ಯತೇತರ ಪಡಿತರ ಚೀಟಿ	ಒಟ್ಟು	ಆದ್ಯತಾ ಪಡಿತರ ಚೀಟಿ	ಆದ್ಯತೇತರ ಪಡಿತರ ಚೀಟಿ	ಒಟ್ಟು
2	3	4	5	6	7	8	9	10	11	12	13	14
BAGALKOTE	71082	4820	75902	15982	20457	36439	17044	7525	24569	104108	32802	136910
BALLARI	117877	4073	121950	20184	5940	26124	17922	6513	24435	150983	16526	167509
BANGALORE EAST	18736	681	19417	1848	2209	4057	2383	452	2835	24967	1342	26309
BANGALORE NORTH	35782	1750	37532	6037	1217	7254	4174	1539	5713	45913	4506	50419
BANGALORE SOUTH	25449	347	25796	6661	210	6871	3631	706	4337	35741	1263	37004
BANGALORE WEST	49920	1726	51646	9706	699	10405	7084	1081	8165	66710	3506	70216
BELAGAVI	250661	9548	260209	27261	11977	39738	37126	12814	49940	315048	34339	349387
BENGALURU	60842	7336	68178	7191	3333	10524	16129	7480	23609	84162	18149	102311
BENGALURU RURAL	21367	488	21855	4885	907	5792	7679	1254	8933	28931	2649	31580
BIDAR	54880	2907	57787	9062	5125	14187	10434	7442	17876	74376	15474	89850
CHAMARAJANAGARA	34604	1560	36164	7896	1218	9114	4899	1411	6310	47399	4189	51588
CHIKKABALLAPURA	29195	1522	30717	7135	986	8121	5458	1904	7352	41788	4412	46200
CHIKKAMAGALURU	36007	3561	39568	10288	2762	14050	6841	2958	9799	53136	9281	62417
CHITRADURGA	51354	2571	53925	8600	3200	11800	7689	3145	10834	67643	8916	76559
DAKSHINA KANNADA	38952	12854	51806	17945	7144	25089	12191	25217	37608	69288	45215	114503
DAVANAGERE	49175	2677	51852	11106	4409	15515	6276	3661	9937	68557	10747	79304
DHARWAD	62140	6316	68456	9522	5549	15071	8337	9507	17639	79994	21172	101166
GADAG	32717	2323	35040	7306	2523	9829	6375	2969	9344	46398	7815	54213
HASSAN	30546	3239	33785	12988	4493	17481	9576	6322	15898	53110	14054	67164
HAVERI	60002	2659	62661	11512	3467	14979	8327	2972	11299	79841	9098	88939
KALABURAGI	96316	7910	104226	26110	6556	32666	20007	7376	27383	142433	21842	164275
KODAGU	12269	856	13125	6391	2054	8445	3440	4289	7729	22100	7199	29299
KOLAR	40089	3865	43954	6688	1759	8447	4993	3192	8185	51770	8816	60586
KOPPAL	42757	1549	44306	13401	2566	15967	6485	2881	11366	64643	6996	71639
MANDYA	61172	4059	65231	6982	2400	9382	4036	5466	9502	72190	11925	84115
MYSURU	108933	9128	118061	15759	4452	21211	6995	7898	14893	132687	21478	154165
RAICHUR	75534	1889	77423	28578	4288	32866	21490	4064	25554	125602	10241	135843
RAMANAGARA	18742	745	19487	7120	1886	9006	5424	1674	7098	31286	4305	35591
SHIVAMOGGA	64273	4659	68932	14650	3291	17941	7939	5438	13377	86862	13358	100250
TUMAKURU	78065	3829	81894	14701	3816	18517	11035	9529	20564	103801	17174	120975
UDUPI	20232	4956	25188	7599	2116	9715	7505	10035	17540	35336	17107	52443
UTTARA KANNADA	34894	3470	38364	14132	2531	16663	6052	4402	10454	55078	10403	65481
VIJAYAPURA	80660	3464	84124	47410	11241	58651	28317	7762	36079	156387	22467	178854
YADGIR	42053	1224	43277	16476	1341	17817	10271	2505	12776	68800	5070	73870
TOTAL	1907277	124561	2031838	444112	136122	580234	335759	183183	518942	2687148	443866	3131014

LLQ-228

ಅನುಬಂಧ-2

CONVERSION OF PHH RATION CARDS INTO AAY RATION CARDS FROM 2018 TO 2021

Sl No	District Name	Jan-18	Jan-19	Jan-20	Jan-21	2019-2018	2020-2019	2021-2020	Total
		No of AAY Cards	No of AAY Cards	No of AAY Cards	No of AAY Cards	No of AAY Cards	No of AAY Cards	No of AAY Cards	
1	BAGALKOTE	37247	37018	46585	46145	-229	9567	-440	**8898**
2	BENGALURU	6151	6153	12935	13094	2	6782	159	**6943**
3	BANGALORE EAST	2039	2036	2470	2592	-3	434	122	**553**
4	BANGALORE NORTH	2225	2217	2596	2725	-8	379	129	**500**
5	BANGALORE SOUTH	5295	5310	5706	5817	15	396	111	**522**
6	BANGALORE WEST	4127	4209	4554	4678	82	345	124	**551**
7	BENGALURU RURAL	6727	6656	14420	14515	71	7764	95	**7788**
8	BELAGAVI	44980	44668	69186	68588	312	24518	-598	**23608**
9	BALLARI	55441	55220	66721	66717	221	11501	-4	**11276**
10	BIDAR	34847	34763	39901	39922	-84	5138	21	**5075**
11	VIJAYAPURA	36027	35697	42485	41189	-330	6788	-1296	**5162**
12	CHAMARAJANAGARA	21482	21331	35776	35803	-151	14445	27	**14321**
13	CHIKKAMAGALURU	12758	12678	22722	22386	80	10044	-336	**9628**
14	CHITRADURGA	26881	26634	42579	42409	-247	15945	-170	**15528**
15	CHIKKABALLAPURA	15006	14831	28667	28600	-175	13836	-67	**13594**
16	DAKSHINA KANNADA	23726	23627	23221	23239	-99	-406	18	**-487**
17	DAVANAGERE	34567	34252	45937	45685	-315	11685	252	**11118**
18	DHARWAR	21749	21735	29874	29871	-14	8139	-3	**8122**
19	GADAG	21447	21339	28551	28427	108	7212	-124	**6980**
20	KALABURAGI	54034	53986	63453	63553	-48	9467	100	**9519**
21	HASSAN	11303	11219	23697	23509	-84	12478	-188	**12206**
22	HAVERI	31549	31383	47317	47170	-166	15934	147	**15621**
23	KODAGU	6349	6287	10148	10139	-62	3861	-9	**3790**
24	KOLAR	20196	20162	29970	30019	-34	9808	49	**9823**
25	KOPPAL	37016	36815	37552	38106	-201	737	554	**1090**
26	MANDYA	19746	19548	34611	34585	-198	15063	-26	**14839**
27	MYSURU	19310	19181	50631	50485	-129	31450	-146	**31175**
28	RAICHUR	45469	45160	53098	53556	-309	7938	458	**8087**
29	RAMANAGARA	11885	11807	19013	19167	-78	7206	154	**7282**
30	SHIVAMOGGA	16658	16553	38201	37934	-105	21648	-267	**21276**
31	TUMAKURU	30002	29657	50094	49460	-345	20437	-634	**19458**
32	UDUPI	29408	29209	28741	28593	-199	-468	-148	**-815**
33	UTTARA KANNADA	10023	9910	16223	16277	-113	6313	54	**6254**
34	YADGIR	28027	27828	29220	29354	-199	1392	134	**1327**
Total		**783697**	**779079**	**1096855**	**1094309**	**-4618**	**317776**	**-2546**	**310612**

NOTE: 3,10,612 PHH ration cards are converted into AAY ration card in last 3 years

Joint Director (IT)
Food, Civil Supplies
And Consumer Affairs
Department